ಅಧ್ಯಕ್ಷರು : ಇವತ್ತು ಅದೇ ತರಹ ಮಾಡಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾಳೆಯಿಂದ ಅಲೋ ಮಾಡಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ನಾಳೆಯಿಂದ ಮಾಡುತ್ತೇನೆ. ನಾಳೆ ನಾಡಿದ್ದು ಮಾಡುತ್ತೇನೆ. ಇವತ್ತು ಕೊನೆಗೆ ಹಾಕಿದ್ದೇನೆ. ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇವತ್ತಿನದಲ್ಲ. ನಾಳೆ ನಾಡಿದ್ದು ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಕೊನೆಯಲ್ಲಿ ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ. 6 ರಿಂದ 7 ಗಂಟೆಗೆ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಪಿ.ರೇಣುಕಾಚಾರ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ರೈತರ ಪಂಪ್‌ಸೆಟ್ಟು ಮೇಲಿನ ಬಾಕಿಯನ್ನು ಮನ್ನಾ ಮಾಡುವುದಕ್ಕೆ ಸಚಿವರು ತಿಳಿಸಲಿಲ್ಲ. ಎಲ್ಲಾ ಕಡೆ ಹಳ್ಳಿಗಳಲ್ಲಿ ಇಲಾಖೆಯವರು ಪೊಲೀಸ್‌ನವರನ್ನು ಕರೆದುಕೊಂಡು ಹೋಗಿ ಕೇಸ್ ಹಾಕುತ್ತಾರೆ. ಉದಾಹರಣೆಗೆ ಹೊನ್ನಾಳಿ ತಾಲ್ಲೂಕಿನ ಮಳಲಿ ಗ್ರಾಮದಲ್ಲಿ ದಯಮಾಡಿ ಒಂದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. ಈಗ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣ ಪ್ರಸ್ತಾವ. 2005 ರ ಜನವರಿ 20 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರುಗಳಾದ ನಾವು ರಾಜ್ಯಪಾರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಲು ಅಪ್ಪಣೆ ಕೋರುವುದು. ಮಾನ್ಯ ರಮೇಶ್‌ಕುಮಾರ್‌ರವರು ಅದನ್ನು ಸೂಚಿಸುವುದು.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಎಷ್ಟು ಸಾರಿ ನಿಮಗೆ ಹೇಳುವುದು? ಪದೇ ಪದೇ ಎಷ್ಟು ಸಾರಿ ಹೇಳುವುದು? ಈ ತರಹವಾದರೆ ನಾವು ನಿಯಂತ್ರಣ ಮಾಡುವುದು ಕಷ್ಟವಾಗುತ್ತದೆ. ಈ ಸಭೆ ನಡೆಸುವುದು ಕಷ್ಟವಾಗುತ್ತದೆ. ನೀವೆಲ್ಲಾ ಜವಾಬ್ದಾರಿಯಿಂದ ಬಂದಿರತಕ್ಕ ಸದಸ್ಯರು. ನೀವು ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ.ಪಿ.ರೇಣುಕಾಚಾರ್ಯ : ನಮಗೆ ತಾವು ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು : ನಿಮಗೆ ಅವಕಾಶ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಇದೆ. ನಾನು ನಿಮಗೆ ಅವಕಾಶವನ್ನು ಮಾಡಿಕೊಡುತ್ತೇನೆ. ದಯಮಾಡಿ ತಾವು ಸಹಕರಿಸಬೇಕು. ಈಗ ಮಾನ್ಯ ರಮೇಶ್‌ಕುಮಾರ್‌ರವರು.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ: ಬಿಜಾಪುರ ಜಿಲ್ಲೆಗೆ ನೀರಾವರಿ ಸೌಲಭ್ಯ ಒದಗಿಸುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನೀವು ಇರಲಿಲ್ಲ ಸಾರ್. ಬೆಳಿಗ್ಗೆ ಅವರು ಪ್ರಸ್ತಾಪ ಮಾಡಿದರು. ನಿಮ್ಮಲ್ಲಿ ಒಂದೇ ವಿನಂತಿ ಏನೆಂದರೆ ಇದು ಪ್ರಿಸ್ಟೀಜ್ ಅಂತ ಏನೂ ಇಲ್ಲ. ಆ ಬಿಜಾಪುರದ ನೀರಾವರಿ ಯೋಜನೆ ಬಗ್ಗೆ ಏನೂ ಹೆಚ್ಚು ಬೇಡಿಕೆ ಇಲ್ಲ. ಅಲ್ಲಿನ ಕೆರೆಗಳನ್ನು ನೀರಿನಿಂದ ತುಂಬಿಸಿ. ಮತ್ತೆ ಅಭಿವೃದ್ಧಿ ಕಾರ್ಯದ ಕಡೆಗೆ

ಗಮನವನ್ನು ಕೊಡಿ. ಮುಂದಿನ ಬಜೆಟ್‌ನಲ್ಲಿ ಎರಡೂವರೆ ಸಾವಿರ ಕೋಟಿ ತೆಗೆದಿಟ್ಟು ಮಾಡಿ. ತಾವು ಇದನ್ನು ಪ್ರಿಸ್ಟೀಜ್ ಎಂದು ತೆಗೆದುಕೊಳ್ಳದೆ ತಾವು ಅಲ್ಲಿಗೆ ಹೋಗಿ ಬಂದು ಅಲ್ಲಿ ಭೇಟಿ ಮಾಡಿ ದಯಮಾಡಿ ಅಲ್ಲಿಗೆ ಹೋಗಿ ಬನ್ನಿ.

ಶ್ರೀ ಎನ್ ಧರ್ಮಸಿಂಗ್(ಮುಖ್ಯ ಮಂತ್ರಿಗಳು) : ಈಗ ಹೋಗುವುದಕ್ಕಾಗುವುದಿಲ್ಲ. ಟೈಮ್ ಇಲ್ಲ. ನಾವು ಇಲ್ಲಿ ಇರಬೇಕು. ನಾವು ಹೇಗೆ ಅಲ್ಲಿಗೆ ಹೋಗಲು ಬರುತ್ತದೆ? ಅಲ್ಲಿಗೆ ಜಿಲ್ಲಾ ಉಸ್ತುವಾರಿ ಸಚಿವರು ಹೋಗಿದ್ದಾರೆ. 16 ನೇ ತಾರೀಖಿಗೆ ನಾವು ಕರೆಸಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ: ಅಲ್ಲಿಗೆ ನೀರಾವರಿ ಮಂತ್ರಿಯವರಾದರೂ ಕನಿಷ್ಟ ಪಕ್ಷ ಹೊದರೆ ಅದು ಆಗುತ್ತದೆ.

ಶ್ರೀ ಧರ್ಮಸಿಂಗ್ : ಅವರೊಡನೆ ಮಾತನಾಡಿ ಆ ತರಹ ನಾನು ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ರಮೇಶ್‌ಕುಮಾರ್‌ರವರು. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಿಮಗೆ ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಅವಕಾಶವನ್ನು ಮಾಡಿಕೊಡುತ್ತೇನೆ. ನಿಮಗೆ ಏನು ಹೇಳೋಣ. ದಯಮಾಡಿ ಕುಳಿತುಕೊಳ್ಳಿ. ನೀವು ಸಹಕರಿಸಬೇಕು. ದಯಮಾಡಿ ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಅವರಿಗೆ ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಡಿ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಸಹಕರಿಸಿ ಎಂದು ಹೇಳಿದರೆ ಅವರಿಗೆ ಅರ್ಥವಾಗುವುದಿಲ್ಲವೇ?

ಶ್ರೀ ಅಲ್ಕೋಡ್ ಹನುಮಂತಪ್ಪ : ಮಾನ್ಯ ಅಧ್ಯಕ್ಷರೆ, ಅವರು ನಾಯಕರು ಹೇಳುವುದನ್ನು ಕೇಳುತ್ತಾರೋ ಇಲ್ಲವೋ? ಅವರ ನಾಯಕರ ಬಗ್ಗೆ ಗೌರವ ಇದೆಯೋ ಇಲ್ಲವೋ ಸ್ವಲ್ಪ ದಯವಿಟ್ಟು ಕೇಳಿ.

ಅಧ್ಯಕ್ಷರು : ನೀವೆಲ್ಲಾ ನೂತನ ಸದಸ್ಯರುಗಳಿದ್ದೀರಿ. ದಯಮಾಡಿ ನಿಯಮಗಳನ್ನು ಅರ್ಥಮಾಡಿಕೊಳ್ಳಿ. ಸಭೆ ನಿಯಮಾವಳಿಗಳ ಪ್ರಕಾರ ನಡೆಯಬೇಕಾಗುತ್ತದೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿಮ್ಮ ಮುಖಂಡರುಗಳೆಲ್ಲ ಇದ್ದರು. ಎಲ್ಲಾ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಈಗ ಏನೆಂದರೆ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯ ಆರಂಭವಾಗುತ್ತಾ ಇದೆ. ಬಹಳ ತಡವಾಗಿ ಆಗುತ್ತಾ ಇದೆ. ನೀವೆಲ್ಲ ಮಾತನಾಡುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತೇನೆ. ಅದಕ್ಕೆ ಅನಕಾಶ ಇದೆ. ದಯಮಾಡಿ ಸಹಕರಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಬೆಳಿಗ್ಗೆ 9 ಗಂಟೆಯಿಂದ ಸಾಯಂಕಾಲ 7 ಗಂಟೆಯವರೆಗೂ ಮಾಡಿರುವ ಉದ್ದೇಶವೇ ನಮ್ಮೆಲ್ಲಾ ಶಾಸಕರು ಬೇರೆ ಬೇರೆ ನಿಯಮಾವಳಿಗಳಲ್ಲೇನು ಅಧ್ಯಕ್ಷರು ಅನುಮತಿಯನ್ನು ಕೊಟ್ಟಿದ್ದಾರೆ. ಅದನ್ನು

ಪ್ರಸ್ತಾಪ ಮಾಡುವುದಕ್ಕೆ ರಾಜ್ಯಪಾಲರ ಭಾಷಣದಲ್ಲಿ ನೀವು ಪ್ರತ್ಯೇಕವಾಗಿ ಮಾತನಾಡಿ ಉತ್ತರವನ್ನು ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡೋಣ ಅದಕ್ಕೆ ಸರ್ಕಾರ ಒಪ್ಪಿಕೊಂಡಿದೆ. ದಯಮಾಡಿ ಸಹಕರಿಸಿ. ಬೇರೆ ದಾರಿ ಇಲ್ಲ. ಬಿಜಾಪುರ ಜಿಲ್ಲೆಯ ಬಗ್ಗೆ ಮುಖ್ಯಮಂತ್ರಿಗಳಿಗೆ ಹೇಳಿದ್ದೇನೆ. ಅವರು ಸಂಬಂಧಪಟ್ಟ ಸಚಿವರನ್ನು ಕಳುಹಿಸಿ ಎಂದು ಹೇಳಿದ್ದೇನೆ. ಅಲ್ಲಿಗೆ ನೀರಾವರಿ ಸಚಿವರನ್ನು ಕಳುಹಿಸಿ ಎಂದು ನಾನು ಮತ್ತೆ ಒತ್ತಾಯವನ್ನು ಮಾಡುತ್ತಿದ್ದೇನೆ.

5. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ಶ್ರೀ ಕೆ.ಆರ್. ರಮೇಶ್‌ಕುಮಾರ್(ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಪ್ರಸ್ತಾವವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ:

"2005 ರ ಜನವರಿ 20ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ, ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು, ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ."

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ(ಬೆಳ್ಳಾವಿ): ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಸ್ತಾವನೆಯನ್ನು ಅನುಮೋದಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಬಹಳ ಅದೃಷ್ಟ ಮಾಡಿದ್ದೇನೆ. ರಾಜ್ಯಪಾಲರಿಗೆ ಒಂದು ರೀತಿಯಾದರೆ ನನಗೆ ಅವರಿಗಿಂತ ಹೆಚ್ಚು ಕಷ್ಟವಾಯಿತು. ನನ್ನ ಹೆಸರನ್ನು ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸಿಬಿಟ್ಟರು. ನಾನು ದಿವಸ ನೋಟ್ಸ್ ಮಾಡಿಕೊಂಡಿದ್ದನ್ನು ಹೊತ್ತುಕೊಂಡು ಬರುವುದು. ಆದರೆ ದಿನ ಆ ವಿಷಯ ಚರ್ಚೆಗೇ ಬರುತ್ತಿರಲಿಲ್ಲಾ. ಆದರೆ ಇವತ್ತು ಅದನ್ನು ಬಿಟ್ಟುಬಂದೆ. ತಾವು ಮಾತನಾಡಬೇಕು ಎಂದು ಹೇಳುತ್ತಿದ್ದೀರಿ ಆಯಿತು. ಕಡಗೂ ರಾಜ್ಯಪಾಲರಿಗೆ ವಂದನೆಯನ್ನು ಸಲ್ಲಿಸತಕ್ಕಂಥ ಅವಕಾಶ ನನಗೆ ಸಿಕ್ಕಿದೆ. ಸಮ್ಮಿಶ್ರ ಸರ್ಕಾರದ ಎಲ್ಲಾ ಉದ್ದೇಶಗಳನ್ನು ಇಲ್ಲಿ ನಮೂದಿಸಲಾಗಿದೆ. ಲೋಕೋವಿಭಿನ್ನ ರುಚಿ ಅಂತ; ನಿಮಗೆ ಹಾಗೆ ಅನ್ನಿಸುತ್ತೆ, ನನಗೆ ಹೀಗೆ ಅನ್ನಿಸುತ್ತೆ, ನಾನೇನು ಮಾಡಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಮಾತನಾಡಿ ಸಾರ್. ನಿಮಗೆ ಸಂಪೂರ್ಣ ಸಹಕಾರವನ್ನು ನಾವು ಕೊಡುತ್ತೇವೆ. ನೀವಾದರೂ ಈ ಸರ್ಕಾರದ ಎಂಟು ತಿಂಗಳ ವೈಫಲ್ಯತೆಯನ್ನು ನಮ್ಮೆಲ್ಲರಿಗೂ ಮನದಟ್ಟಾಗುವ ಹಾಗೆ ಮನವರಿಕೆ ಮಾಡುತ್ತೀರಿ ಎನ್ನುವ ವಿಶ್ವಾಸದೊಂದಿಗೆ ನಾವು ನಿಮ್ಮ ಮಾತಿಗೆ ಸ್ವಾಗತವನ್ನು ಮಾಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ನಿನ್ನೆಯೇ ಅದರ ಬಗ್ಗೆ ತಾವು ಸೂಚನೆಯನ್ನು ಕೊಟ್ಟಿದ್ದೀರಿ.

ಶ್ರೀ ಕೆ.ಎಸ್.ಈಶ್ವರಪ್ಪ : ನಿನ್ನೆ ತಾವು ಅಂತರಾಳದ ಮಾತನ್ನು ಆಡಿದಿರಿ. ತಮ್ಮ ಆತ್ಮದ ಶೋಧನೆ ಮಾಡಿಕೊಂಡು ನಿನ್ನೆ ಮಾತನಾಡಿದ್ದೀರಿ. ಇವತ್ತು ಅದಕ್ಕೆ ತದ್ವಿರುದ್ಧವಾಗಿ ಮಾತನಾಡತಕ್ಕಂಥ ದುಸ್ಥಿತಿ ನಿಮಗೆ ಬಂದಿದೆ ಎಂದು ನನಗೆ ಬೇಜಾರು ಆಗುತ್ತದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಆಗಾಗ ಮಾನ್ಯ ರಮೇಶ್ ಕುಮಾರ್ ಅವರು ಆ ಸ್ಥಿತಿಯಲ್ಲಿ ಮಾತನಾಡತಕ್ಕಂಥ ಅಭ್ಯಾಸ ಇದೆ. ಆದರೆ ಅವರಿಗೆ ಈ ಸ್ಥಿತಿ ಬರಬಾರದಿತ್ತು ಎಂಬುದು ನಮ್ಮೆಲ್ಲರ